ಮನೆ ಬಾಗಿಲಲ್ಲೇ ಸೇವಾ ಸೌಲಭ್ಯ

ಗ್ಯಾಸ್ ಸ್ಟವ್, ಮಿಕ್ಸಿ, ಕುಕ್ಕರ್ ಜಾರ್, ಪಂಪ್ ಸ್ಟವ್ ಮತ್ತಿತರ ಅಡಿಗೆ ಮನೆಯಲ್ಲಿ ಬಳಸುವ ಸಾಧನಗಳ ದುರಸ್ತಿಯನ್ನು ನಿಮ್ಮ ಮನೆ ಬಾಗಿಲಲ್ಲೇ ಮಾಡಿಕೊಡಲಾಗುವುದು. ದೂರವಾಣಿ ಕರೆ ಮಾಡಿ ಸಂಪರ್ಕಿಸಿದ ಅರ್ಧ ಗಂಟೆಯೊಳಗೆ ಸೇವೆ ಲಭ್ಯ. ಅಗತ್ಯವಾದಲ್ಲಿ ಸಂಪರ್ಕಿಸಿ

ಮಂಜು– 953530417, 8618187339

13ನೇ ವರ್ಷದಲ್ಲಿ

ಹಾಸನ ವಾಣಿ

http://hassanvani.epapertoday.com ಸಂಪಾದಕರು ಲೀಲಾವತಿ E-mail:hassanvani@gmail.com

ಗೌರಿಲಂಕೇಶ್‌ಹತ್ಯೆ: ಖಂಡನೀಯ

ಹಾಸನ: ಮಂಗಳವಾರ ರಾತ್ರಿ ದುಷ್ಕರ್ಮಿಗಳಿಂದ ಹತ್ಯೆಯಾದ ಹಿರಿಯ ಪತ್ರಕರ್ತೆ, ಸಾಹಿತಿ ಹಾಗೂ ಹೋರಾಟಗಾರ್ತಿ.ವಿಚಾರವಾದಿ ಹತ್ಯೆಯನ್ನು ರಾಷ್ಟ್ರೀಯ ಪತ್ರಕರ್ತರ ಸಂಘದ ಮಹಾ ಪ್ರಧಾನ ಕಾರ್ಯದರ್ಶಿ ಹೆಚ್.ಪಿ. ಮದನಗೌಡ ತೀವ್ರವಾಗಿ ಖಂಡಿಸಿದ್ದಾರೆ.

ಹಾಸನವಾಣಿ ಕನ್ನಡ ದಿನಪತ್ರಿಕೆ DAILY ಸಂಪುಟ:13 ಸಂಚಿಕೆ 187, ಗುರುವಾರ, 07–09–2017,ದೂ.ಸಂಖ್ಯೆ 265898,ಬೆಲೆ ರೂ 1.50, ಪುಟ 4 RNI-16681/2004 KA/SK/HSN-/753/2017-2019

ನಾವು ನಾವಾಗೆ ಗೌರಿಯಾಗಿಹೆವು....

ನಮ್ಮದು ಗಿಯನಾರ್ಡೋ ಬ್ರೂನೋ ವಂಶ..
ನಿಮ್ಬೆಂಕಿ ನಮ್ಮನ್ನು ಬಗ್ಗಿಸದು..॥
ನಮ್ಮದು ಗೆಲಿಲಿಯೋ–ಡಾರ್ವಿನ್ನರ ವಂಶ
ನಿಮ್ಮ ಹಗ್ಗ ನಮ್ಮ ಬದ್ಧತೆಯನ್ನು ಅಳಿಸಿ ಹಾಕದು.॥
ನಮ್ಮದು ಬುದ್ದ–ಬಸವರ ವಂಶ
ನಿಮ್ಮ ಕತ್ತಿ ನಮ್ಮೆದೆಯನ್ನು ಸೀಳದು॥
ನಮ್ಮದು ಗಾಂಧಿ, ಬಾಬಾಸಾಹೇಬರ ವಂಶ
ನಮ್ಮುಸಿರ ಭಸ್ಮ ಮಾಡಲಾಗದು॥
ನಮ್ಮದು ದಾಬೋಲ್ಕರ್, ಪನಸಾರೆ , ಕಲಬುರ್ಗಿಯವರ ವಂಶ
ನಿಮ್ಮ ಗುಂಡು ನಮ್ಮೆದೆಯ ಬಯಕೆಗಳ ತಗ್ಗಿಸದು..॥
ನಾವು ನಾವಾಗೆ ಗೌರಿಯಾಗಿಹೆವು....
ನಮ್ಮ ಚಳುವಳಿಯನ್ನು ಮುರಿಯಲಾದು.॥.
ನಾವು ಪ್ರಜಾಪ್ರಭುತ್ವದ ಲ್ಲೆ ಅಚಲ ನಂಬಿಕೆ ಇರಿಸಿದ್ದೇವೆ
ಬರುತಿಹೆವು ನಾವು ಬರುತಿಹೆವು॥
ನಿಮ್ಮ ಸಿದ್ದಾಂತಕ್ಕೆ ಚಟ್ಟಕಟ್ಟಲು..
ಒಂದಲ್ಲಾ ಒಂದು ದಿನ ॥
ನಿಮ್ಮ ಜನವಿರೋಧಿ ಸಿದ್ದಾಂತಕ್ಕೆ,
ಮಾನವ ಪ್ರೀತಿ ಇಲ್ಲದ ನಿಮ್ಮ ಹೃದಯಗಳಿಗೆ ॥
ಈ ನಾಡಜನ ಕೊಳ್ಳಿ ಇಡುವರು....
ನಿಮ್ಮನ್ನು ಕೂಡ ಮನುಜರನ್ನಾಗಿ॥
ಮಾಡೇ ಮಾಡುವರು.
ನಾವು ಮಾಡೇ ಮಾಡುವೆವು

– **ಅಹಮದ್ ಹಗರೆ**

ಮಣ್ಣಲ್ಲಿ ಮಣ್ಣಾದ ಗೌರಿಲಂಕೇಶ್

ಬೆಂಗಳೂರು:ಸೆ,6– ಮಂಗಳವಾರ ರಾತ್ರಿ ದುಷ್ಕರ್ಮಿಗಳಿಂದ ಹತ್ಯೆಯಾದ ಹಿರಿಯ ಪತ್ರಕರ್ತೆ, ಸಾಹಿತಿ ಹಾಗೂ ಹೋರಾಟ ಗಾರ್ತಿ ಗೌರಿ ಲಂಕೇಶ್ ಅವರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವದೊಂದಿಗೆ ಬುಧವಾರ ಸಂಜೆ ಚಾಮರಾಜಪೇಟೆಯ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿತು.

ರಾಜ್ಯ ಸರ್ಕಾರದ ವತಿಯಿಂದ ಪೊಲೀಸ್ ಗೌರವದೊಂದಿಗೆ ಯಾವುದೇ ಸಂಪ್ರದಾಯವನ್ನು ನೆರವೇರಿಸದೇ ಹೂವನ್ನು ಇಟ್ಟು ಅಂತ್ಯಸಂಸ್ಕಾರ ನಡೆಸಲಾತಿಯು.

ಸಂಸ ಬಂಯುಲು ರಂಗ ಮಂದಿರದಲ್ಲಿ ಅಂತಿಮ ದರ್ಶನ ಪಡೆದ ಸಾವಿರಾರು ಜನರು ರುಧ್ರಭೂಮಿಗೂ ಬಂದು ಅಂತ್ಯ ಸಂಸ್ಕಾರದಲ್ಲಿ ಭಾಗಿಯಾದರು. ಗೌರಿ ಮತ್ತೆ ಹುಟ್ಟಿ ಬಾ ಎನ್ನುವ ಅಭಿಮಾನಿಗಳ ಘೋಷಣೆ ಮುಗಿಲು ಮುಟ್ಟಿತು.

ಗೌರಿ ಲಂಕೇಶ್ ಅವರ ಸಹೋದರ ಇಂದ್ರಜಿತ್ ಲಂಕೇಶ್, ಸಹೋದರಿ ಕವಿತಾ ಲಂಕೇಶ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಉಮಾಶ್ರೀ ,ರಾಮಲಿಂಗಾರೆಡ್ಡಿ, ರಮೇಶ್ ಕುಮಾರ್, ಲೇಖಕ ದೇವನೂರು ಮಹಾದೇವ, ಶಾಸಕ ಜಮೀರ್ ಅಹ್ಮದ್ ಖಾನ್ ಸೇರಿದಂತೆ ಹಲವು ಗಣ್ಯರು ಅಂತಿಮ ದರ್ಶನ ಪಡೆದರು.ಗೌರಿ ಲಂಕೇಶ್ ಜೀವನದುದ್ದಕ್ಕೂ ಧಾರ್ಮಿಕ ಆಚರಣೆ ಮೇಲೆ ನಂಬಿಕೆ ಇಟ್ಟಿರಲಿಲ್ಲ. ಹೀಗಾಗಿ ಅಂತ್ಯಕ್ರಿಯೆ ವೇಳೆ ಯಾವುದೇ ವಿಧಿವಿಧಾನ ಪಾಲಿಸುವುದಿಲ್ಲ. ಕೊನೆ ಕ್ಷಣದಲ್ಲಿ ಗೌರಿ ಅವರ ನಂಬಿದ ತತ್ವಗಳಿಗೆ ಧಕ್ಕೆ ತರಲ್ಲ ಎಂದು ಇಂದ್ರಜಿತ್ ಲಂಕೇಶ್ ಈ ಮುಂಚೆ ಸ್ಪಷ್ಟಪಡಿಸಿದ್ದರು.

ಸಾವಿನಲ್ಲೂ ಸಾರ್ಥಕತೆ ಮೆರೆದ ಗೌರಿ ಲಂಕೇಶ್!

ಬೆಂಗಳೂರು: ದುಷ್ಕರ್ಮಿಗಳ ಗುಂಡೇಟಿಗೆ ಎದೆಯೊಡ್ಡು ಸಾವನ್ನಪ್ಪಿದ್ದ ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಅವರು ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದು, ತಮ್ಮ ಕಣ್ಣುಗಳನ್ನು ದಾನ ಮಾಡಿದ್ದಾರೆ.ಗೌರಿ ಲಂಕೇಶ್ ಅವರ ಆಸೆಯಂತೆಯೇ ಅವರ ಕಣ್ಣುಗಳನ್ನು ಬೆಂಗಳೂರಿನ ಮಿಂಟೋ ಆಸ್ಪತ್ರೆಗೆ ದಾನ ಮಾಡಲಾಗಿದೆ. ಗೌರಿ ಲಂಕೇಶ್ ಅವರ ಸಹೋದರ ನಿರ್ದೇಶಕ ಇಂದ್ರಜಿತ್ ಲಂಕೇಶ್ ಅವರ ನೇತೃತ್ವದಲ್ಲಿ ಗೌರಿ ಲಂಕೇಶ್ ಅವರ ಕಣ್ಣುಗಳನ್ನು ಮಿಂಟೋ ಆಸ್ಪತ್ರೆಗೆ ನೀಡಲಾಗಿದೆ ಎಂದು ತಿಳಿದುಬಂದಿದೆ. ಈ ಬಗ್ಗೆ ಸ್ವತಃ ಇಂದ್ರಜಿತ್ ಲಂಕೇಶ್ ಅವರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದು, "ಗೌರಿ ಲಂಕೇಶ್ ಅವರ ಆಸೆಯಂತೆ ಅವರ ಎರಡೂ ಕಣ್ಣುಗಳನ್ನು ದಾನ ಮಾಡಲಾಗಿದೆ ಎಂದು ಹೇಳಿದ್ದಾರೆ.ಅಲ್ಲದೆ ನೇತ್ರದಾನ ಕುರಿತಂತೆ ಮಾಧ್ಯಮಗಳಿಗೆ ನೇತ್ರದಾನ ಪ್ರಮಾಣಪತ್ರವನ್ನೂ ಪ್ರದರ್ಶನ ಮಾಡಿದ್ದಾರೆ. ಈ ವೇಳೆ ಹತ್ಯೆ ಕುರಿತಂತೆ ಮಾತನಾಡಿದ ಇಂದ್ರಜಿತ್ ಲಂಕೇಶ್ ಅವರು, ತಮ್ಮ ಸಹೋದರಿ ಗೌರಿ ಲಂಕೇಶ್ ಸಾವಿಗೆ ನ್ಯಾಯ ಸಿಗಬೇಕು. ಹತ್ಯೆ ನಡೆದಿರುವ ಬಗ್ಗೆ ಸೂಕ್ತ ತನಿಖೆ ನಡೆಸುವ ಭರವಸೆಯನ್ನು ಕಮಿಷರ್ನ ನೀಡಿದ್ದಾರೆ ಎಂದು ಹೇಳಿದ್ದಾರೆ.

ಗೌರಿ ಲಂಕೇಶ್ ಹತ್ಯೆಗೆ ಅಮೆರಿಕ ಖಂಡನೆ

ಚೆನ್ನೈ: ಹಿರಿಯ ಪತ್ರಕರ್ತೆ, ಸಾಹಿತಿ ಹಾಗೂ ಹೋರಾಟಗಾರ್ತಿ ಗೌರಿ ಲಂಕೇಶ್ ಅವರ ಹತ್ಯೆಯನ್ನು ಅಮೆರಿಕ ತೀವ್ರ ಖಂಡಿಸಿದೆ.ಈ ಸಂಬಂಧ ಚೆನ್ನೈನಲ್ಲಿರುವ ಅಮೆರಿಕ ರಾಯಭಾರ ಕಚೇರಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದು, ಬೆಂಗಳೂರಿನಲ್ಲಿ ನಡೆದ ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಅವರ ಹತ್ಯೆಯನ್ನು ಖಂಡಿಸುವುದಾಗಿ ಮತ್ತು ಭಾರತ ಹಾಗೂ ವಿಶ್ವಾದ್ಯಂತ ಮಾಧ್ಯಮ ಸ್ವಾತಂತ್ರ್ಯ ಪ್ರತಿಪಾದಕರ ಜತೆ ಕೈಜೋಡಿಸುವುದಾಗಿ ತಿಳಿಸಿದೆ. ಅಲ್ಲದೆ ಗೌರಿ ಲಂಕೇಶ್ ಸಾವಿಗೆ ಸಂತಾಪ ಸೂಚಿಸಿದೆ.

ಗೌರಿ ಲಂಕೇಶ್ ಹತ್ಯೆ ಖಂಡಿಸಿ ಪತ್ರಕರ್ತರಿಂದ ಮೌನ ಪ್ರತಿಭಟನೆ





ಹಾಸನ: ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಖಂಡಿಸಿ ಜಿಲ್ಲಾ ಪತ್ರಕರ್ತರ ಸಂಘದಿಂದ ಮಾನವ ಸರಪಳಿ ನಿರ್ಮಿಸಿ ಬೃಹತ್ ಮೌನ ಪ್ರತಿಭಟನೆ ನಡೆಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.ಜಿಲ್ಲಾ ಪತ್ರಕರ್ತರ ಭವನದಿಂದ ಮೆರವಣಿಗೆ ಹೊರಟ ಪ್ರತಿಭಟನಕಾರರು ಎನ್‌ಆರ್ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಆರೋಪಿಗಳನ್ನು ಶೀಘ್ರದಲ್ಲಿ ಬಂಧಿಸಬೇಕು. ಗೌರಿ ಲಂಕೇಶ್ ಪತ್ರಕರ್ತರಲ್ಲದೆ ವಿಚಾರವಾದಿ ಸಮಾಜದ ಒಳಿತಿಗೆ ಶ್ರಮಿಸುತ್ತಿದ್ದರು. ಇಂತಹ ಮಹಿಳೆಯನ್ನು ಹತ್ಯೆ ಮಾಡಿರುವುದು ನಿಜಕ್ಕೂ ಖಂಡನೀಯ ಆದ್ದರಿಂದ ಸರ್ಕಾರ ಕೂಡಲೇ ಆರೋಪಿಗಳನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು. ಮಹಿಳೆಯನ್ನು ಕಿಡಿಗೇಡಿಗಳು ಹತ್ಯೆ ಮಾಡಿರುವುದು ನಿಜಕ್ಕೂ ನಾಗರಿಕ ಸಮಾಜ ತಲೆ ತಗ್ಗಿಸುವಂತಾಗಿದೆ ಕೊಲೆಗಡುಕರನ್ನು ಸರ್ಕಾರ ಕೂಡಲೇ ಬಂಧಿಸಬೇಕು ಅಲ್ಲದೇ ಇಂತಹ ಕೊಲೆಯ ಹಿಂದೆ ಕೆಲವರ ಕೈವಾಡ ಗಳು ಅಡಗಿರುವುದು ನಿಜಕ್ಕೂ ಸಮಾಜಕ್ಕೆ ಮಾರಕವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕೂಡಲೇ ಸಿಬಿಐ ತನಿಖೆಗೆ ಒಳಪಡಿಸಿ ಕೊಲೆ ಮಾಡಿರುವವರ ಜೊತೆಗೆ ಇದಕ್ಕೆ ಬೆಂಬಲವಾಗಿ ನಿಂತಿರುವವರನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರಿಗೆ ಮನವಿ ಸಲ್ಲಿಸಲಾಯಿತು.ಕಲಬುರ್ಗಿ ಅವರ ಹತ್ಯೆಯಾಗಿ ಎರಡು ವರ್ಷವಾಗಿದ್ದು ಇದೀಗ ವಿಚಾರವಾದಿ ಪತ್ರಕರ್ತ ಸಾಹಿತಿ ಗೌರಿ ಲಂಕೇಶ್ ಅವರ ಹತ್ಯೆಯಾಗಿರುವುದು ಸಮಾಜಕ್ಕೆ ಕೆಟ್ಟ ಸಂದೇಶ ರವಾನೆಯಾಗುತ್ತಿದೆ. ಆದ್ದರಿಂದ ಸರ್ಕಾರ ಮತ್ತು ಪೊಲೀಸರು ತಕ್ಷಣವೇ ಹಂತಕರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು. ಪತ್ರಕರ್ತರ ಪ್ರತಿಭಟನೆಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಬಾಯಿ ಹಾಗೂ ಹಿರಿಯ ಸಾಹಿತಿ ಭಾನು ಮುಸ್ತಾಕ್ ಅವರು ಬೆಂಬಲ ಸೂಚಿಸಿದರು.ಈ ಸಂದರ್ಭದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ರವಿ ನಾಕಲಗೂಡು, ರಾಷ್ಟ್ರೀಯ ಪತ್ರಕರ್ತರ ಸಂಘದ ಮಹಾ ಪ್ರಧಾನ ಕಾರ್ಯದರ್ಶಿ ಹೆಚ್.ಪಿ. ಮದನಗೌಡ, ಹಿರಿಯ ಪತ್ರಕರ್ತರಾದ ಲೀಲಾವತಿ, ಆರ್.ಪಿ. ವೆಂಕಟೇಶಮೂರ್ತಿ, ಕೆಪಿಎಸ್ ಪ್ರಮೋದ್, ಬಾಳ್ಳುಗೋಪಾಲ್, ರಾಜೇಶ್, ಅತಿಖುರ್ ರೆಹಮನ್, ಎ.ಬಿ.ಮುರುಳಿ, ಹರೀಶ್ ಕೋಟೆ, ಜಿ. ಪ್ರಕಾಶ್, ಹಾಗೂ ಜಿಲ್ಲೆಯ ಇತರೆ ತಾಲೂಕಿನ ಸಂಘದ ಪದಾಧಿಕಾರಿಗಳು ಸೇರಿದಂತೆ ಹಿರಿಯ ಹಾಗೂ ಕಿರಿಯ ಪತ್ರಕರ್ತರು ಭಾಗವಹಿಸಿ ಹತ್ಯೆ ಖಂಡಿಸಿದರು.

ವಿವಿಧ ಸಂಘಟನೆಗಳಿಂದ ಪ್ರತಿಭಟನೆ

ಹಾಸನ: ಹಿರಿಯ ಪತ್ರರ್ತೆ ಹಾಗೂ ಹೋರಾಟಗಾರ್ತಿ ಗೌರಿ ಲಂಕೇಶ್ ಹತ್ಯೆಗೆ ಕಾರಣರಾದ ಆರೋಪಿಗಳನ್ನು ಕೂಡಲೇ ಬಂಧಿಸಿ ಕಠಿಣ ಶಿಕ್ಷೆ ನೀಡ ಬೇಕು ಎಂದು ಆಗ್ರಹಿಸಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ಭಾರತ ಕಮ್ಯೂನಿಸ್ಟ್ (ಸಿಪಿಐ), ಕರ್ನಾಟಕ ದಲಿತ ಸಂಘರ್ಷ ಸಮಿತಿ ಸೇರಿದಂತೆ ವಿವಿಧ ಸಂಘನೆಗಳು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಆವರಣದ ಡಾ. ಬಿ. ಆರ್. ಅಂಬೇಡ್ಕರ್ ಪ್ರತಿಮೆಯಿಂದ
ಜಿಲ್ಲಾಧಿಕಾರಿ ಕಚೇರಿ [redacted] ಪ್ರತಿಭಟನಾಕಾರರು, ಪ್ರಗತಿಪರ
ಚಿಂತಕ, ಜನಪರ ಹ ಪರ್ತಕರ್ತೆ ಗೌರಿ ಲಂಕೇಶ್
ಅವರ ಹತ್ಯೆ ಹಿಂದಿ ರ ಬಂಧಿಸುವಂತೆ ಒತ್ತಾಯಿಸಿ
ಜಿಲ್ಲಾಧಿಕಾರಿ ರೋಹಿ ಪತ್ರ ಸಲ್ಲಿಸಿದರು.
ಗೌರಿ ಲಂಕೇಶ್ ಡಿಯುತ್ತಿದ್ದರು. ಅಂತಹವರನ್ನು
ಗುಂಡಿಕ್ಕಿ ಕೊಂದಿರು ದರ ಹಿಂದೆ ಕೋಮುವಾದಿಗಳ
ಕೈವಾಡ ಅಡಗಿರುವ ಸಿದರು. ಪ್ರತಿಭಟನೆಯಲ್ಲಿ ದಲಿತ

ಮಾನವ ಹಕ್ಕುಗಳ ಸ [redacted] ಸಂಘರ್ಷ ಸಮಿತಿಯ ಅಬ್ದುಲ್
ಸಮದ್, ಹೆತ್ತೂರು ಕೆ ಟಿ ಶಿವಪ್ರಸಾದ್, ವಂದೇ
ಮಾತರಂ ಸಂಸ್ಥಾಪಕ ಸಂಘ ಹಾಗೂ ಹಸಿರು ಸೇನೆ
ಜಿಲ್ಲಾ ಘಟಕದ ಅ ರ್ಯದರ್ಶಿ ಎಂ. ಸಿ. ಡೊಗ್ರೆ,
ಲೇಖಕಿ ರೂಪ ಹಾ ದ್ದರು.

ಗೌರಿ ಲಂಕೇಶ್ ಹತ್ಯೆ: ಆರೋಪಿಗಳ ಶೀಘ್ರ ಬಂಧನಕ್ಕೆ ಒತ್ತಾಯ

ಹಾಸನ: ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಮಾಡಿರುವ ಆರೋಪಿಗಳನ್ನು ಕೂಡಲೇ ಬಂಧಿಸಿ ಕಠಿಣ ಶಿಕ್ಷೆ ವಿಧಿಸುವಂತೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯರು ಆಗ್ರಹಿಸಿದರು.

ಹಾಸನ ಜಿಲ್ಲಾ ಪತ್ರಕರ್ತರ ಸಂಘದಿಂದ ಹಮ್ಮಿಕೊಂಡಿದ್ದ ಸಂತಾಪ ಸಭೆಯಲ್ಲಿ ಎಲ್ಲಾ ಪತ್ರಕರ್ತರು ಆರೋಪಿಗಳ ಬಂಧನಕ್ಕೆ ಒತ್ತಾಯಿಸಿ ಸಂತಾಪ ಸೂಚಿಸಿದರು. ಅಂತರಾಷ್ಟ್ರೀಯ ಚಿತ್ರ ಕಲಾವಿದ ಕೆ.ಟಿ.ಶಿವಪ್ರಸಾದ್ ಗೌರಿ ಲಂಕೇಶ್ ಒಬ್ಬ ವಿಚಾರವಾದಿ ಹಾಗೂ ಪತ್ರಕರ್ತೆ, ಸಾಹಿತಿಯೂ ಆಗಿದ್ದು ತಮ್ಮ ಬರವಣಿಗೆಯ ಮೂಲಕ ಸಮಾಜದ ಅಂಕು ಡೊಂಕುಗಳನ್ನು ತಿದ್ದುವಂತ ಧೀಮಂತ ಮಹಿಳೆ ಆಗಿದ್ದರು. ಇವರನ್ನು ಕಿಡಿಗೇಡಿಗಳು ಹತ್ಯೆ ಮಾಡಿರುವುದು ನಿಜಕ್ಕೂ ನಾಗರಿಕ ಸಮಾಜ ತಲೆ ತಗ್ಗಿಸುವಂತಾಗಿದೆ. ಕೊಲೆಗಡುಕರನ್ನು ಸರ್ಕಾರ ಕೂಡಲೇ ಬಂಧಿಸಬೇಕು ಅಲ್ಲದೇ ಇಂತಹ ಕೊಲೆಯ ಹಿಂದೆ ಕೆಲವರ ಕೈವಾಡಗಳು ಅಡಗಿರುವುದು ನಿಜಕ್ಕೂ ಸಮಾಜಕ್ಕೆ ಮಾರಕವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು

ಹಿರಿಯ ಪತ್ರಕರ್ತೆ ಲೀಲಾವತಿ ಮಾತನಾಡಿ, ಈ ಕೊಲೆ ಪ್ರಕರಣ ನಿಜಕ್ಕೂ ಹೇಯ ಕೃತ್ಯವಾಗಿದ್ದು,ಈಗಾಗಲೇ ರಾಜ್ಯಾದ್ಯಂತ ಇದಕ್ಕೆ ಖಂಡನೆ ವ್ಯಕ್ತವಾಗುತ್ತಿದೆ. ವಿಚಾರವಾದಿಗಳನ್ನು ಕೊಲ್ಲುವಂತಹ ವಾತಾವರಣ ನಿರ್ಮಾಣವಾಗುತ್ತಿರುವುದು ಪ್ರಜಾಪ್ರಭುತ್ವದ ಕಗ್ಗೊಲೆ ಆಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಗತಿಪರ ಚಿಂತಕ ಹಾಗೂ ಹಿರಿಯು ಪತ್ರಕರ್ತ ಆರ್.ಪಿ.ವೆಂಕಟೇಶಮೂರ್ತಿ ಮಾತನಾಡಿ, ಸಮಾಜಮುಖಿ ಚಿಂತನೆಯುಳ್ಳ ಗೌರಿ ಲಂಕೇಶ್ ಅಂತಹ ಮಹಿಳೆಯನ್ನು ಕೊಲೆ ಮಾಡುತ್ತಾರೆ ಎಂದರೆ ಪ್ರಜಾಪ್ರಭುತ್ವ ವ್ಯವಸ್ಥೆ ಯಾವ ಮಟ್ಟಕ್ಕೆ ತಲುಪುತ್ತದೆ ಎಂಬುದು ಅರ್ಥವಾಗುತ್ತಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು. ನಕ್ಸಲರನ್ನು ಮುಖ್ಯವಾಹಿನಿಗೆ ತರುವಲ್ಲಿ ಶ್ರಮಿಸಿದ ಧೀಮಂತ ಮಹಿಳೆದಿಟ್ಟ ಹೋರಾಟಗಾರ್ತಿಯನ್ನು ಕಳೆದುಕೊಂಡಿರುವುದು ಕರ್ನಾಟಕಕ್ಕೆ ತುಂಬಾ ನಷ್ಟ ಉಂಟಾಗಿದೆ ಅಲ್ಲದೆ ಇಂತಹ ಕರಾಳ ದಿನವನ್ನು ನೆನಪಿಸಿಕೊಳ್ಳುವುದು ತುಂಬಾ ಕಷ್ಟವಾಗುತ್ತದೆ ಎಂದರು

ರಾಷ್ಟ್ರೀಯ ಪತ್ರಕರ್ತರ ಸಂಘದ ಮಹಾ ಪ್ರಧಾನ ಕಾರ್ಯದರ್ಶಿ ಹೆಚ್.ಪಿ. ಮದನಗೌಡ ಮಾತನಾಡಿ ಗೌರಿ ಲಂಕೇಶ್ ಅವರ ಸೈದ್ಧಾಂತಿಕ ತತ್ವ ಅವರ ನಿಲುವುಗಳು ಮತ್ತು ಅವರ ಹೋರಾಟವನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಈ ಕೃತ್ಯ ನಡೆದಿದೆ ಆದರೆ ಇಂತಹ ಹಲವು ಮಹಿಳೆಯರು ಹೋರಾಟ ಮಾಡುತ್ತಿದ್ದಾರೆ.ಅವರೆಲ್ಲರ ಬಾಯಿ ಮುಚ್ಚಿಸುತ್ತೇವೆ ಎಂಬುದು ಸುಳ್ಳು ಎಂದು ಹೇಳಿದರು. ಗೌರಿ ಲಂಕೇಶ್ ಅವರ ಸಾವಿನಲ್ಲಿ ಸಂಭ್ರಮಿಸುವ ಕೆಟ್ಟ ಮನಸ್ಥಿತಿಯುವರು ಕೂಡ ನಮ್ಮ ಸಮಾಜದಲ್ಲಿರುವುದು ಮಾರಕವಾಗಿದೆ ಎಂದು ಹೇಳಿದರು.

ಉದಯರವಿ ಮಾತನಾಡಿದರು. ಬಾಳ್ಳು ಗೋಪಾಲ್ ಮಾತನಾಡಿ, ಹಿರಿಯ ಪತ್ರಕರ್ತೆ ಗೌರಿಲಂಕೇಶ್ ಹತ್ಯೆ ಖಂಡನಿಯ. ಸಮಾಜದಲ್ಲಿ ಒಳ್ಳೆ ಕೆಲಸ ಮಾಡುವವರಿಗೆ ಇಂತಹ ಘಟನೆ ನಡೆದಿರುವುದು ನೋವು ತಂದಿದೆ ಎಂದು ಹೇಳಿದರು.

ಹೋರಾಟಗಾರ ಹೆತ್ತೂರು ನಾಗರಾಜ್ ಮಾತನಾಡಿ ಹೋರಾಟಗಾರರನ್ನು ಹತ್ತಿಕ್ಕುವ ಮತ್ತು ಸಮಾಜದ ಚಿಂತನೆ ಬಗ್ಗೆ ಸದಾ ಧ್ವನಿ ಎತ್ತುವ ಮಹಿಳೆಯನ್ನು ಹತ್ಯೆ ಮಾಡಿರುವುದು ನಿಜಕ್ಕೂ ದುರಂತ ಎಂದು ಹೇಳಿದರು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ರವಿ ನಾಕಲಗೂಡು ಅಧ್ಯಕ್ಷತೆವಹಿಸಿ ಮಾತನಾಡಿ, ಕಲಬುರ್ಗಿ ಹತ್ಯೆಯ ಆರೋಪಿಗಳನ್ನು ಇದುವರೆಗೂ ಬಂಧಿಸದೆ ಇರುವುದು ಈ ಕೃತ್ಯ ಎಸಗಲು ಕಾರಣವಾಗಿದೆ ಎಂದು ಹೇಳಿದರು. ಗೌರಿಲಂಕೇಶ್ ಪ್ರಗತಿ ಪರ ಚಿಂತನೆಯಲ್ಲಿ ತೊಡಗಿದವರು. ನ್ಯಾಯಯುತವಾಗಿ ಸುದ್ದಿ ಮಾಡಿ ನ್ಯಾಯ ಒದಗಿಸುವವರಿಗೆ ಇಂತಹ ಘಟನೆ ನಡೆದಿರುವುದು ರಾಜ್ಯದಲ್ಲಿ ಭಯದ ವಾತವರಣ ನಿರ್ಮಾಣ ವಾಗುತ್ತಿದೆ. ಕೂಡಲೇ ಸರಕಾರ ಆರೋಪಿಗಳ ಎಲ್ಲಾರನ್ನು ಬಂಧಿಸಿ ಮತ್ತೆ ಇಂತಹ ಪ್ರಕರಣ ಮರುಕಳಿಸದಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಿದರು. ಸಭೆಯಲ್ಲಿ ಹಿರಿಯ ಹಾಗೂ ಕಿರಿಯ ಪತ್ರಕರ್ತರು ಇದ್ದರು.

ಮಹಿ [redacted] ತಮ್ಮನು ತಾವು ರಕ್ಷಣೆ ಮಾಡಿಕೊಳ್ಳಲು ಕರೆ

ಹಾಸನ: ಮಹಿ [redacted]
ತಾವು ರಕ್ಷಣೆ ಮಾ
ಸ್ಥೈರ್ಯ" ಮನೆ
ಕೊಳ್ಳಬೇಕು ಎಂದು
ಮಹಿಳಾ ಆಯೋ
ನಾಗಲಕ್ಷ್ಮಿ ಬಾಯಿ
ಜಿಲ್ಲಾಧಿಕಾ
ಸಂಭಾಗಣದಲ್ಲಿ ವಿ
ಅಧಿಕಾರಿಗಳೊಂದಿ
ಅವರು ಮಾತನಾ
'ಯರು ಧೈರ್ಯವಾ
ಮೇಲೆ ದೌರ್ಜನ್ಯ
ಶಿಕ್ಷೆಗೆ ಗುರಿ ಪಡಿ
ಹೇಳಿದರು. ಜಿಲ್ಲೆ
ಇಲಾಖೆಗಳಿಂದ ಪ್ರ
ಮೇಲಿನ ದೌರ್ಜನ್ಯ
ಮಾನ ಕುಂದು–

[redacted] ಲಾಯಿತ್ತು.
ರ್ತಕರ್ತೆ ಗೌರಿ ಲಂಕೇಶ್ ಹತ್ಯೆ
ಸಭೆಯಲ್ಲಿ ಕರ್ನಾಟಕ ರಾಜ್ಯ
ಆಯೋಗದ ಅಧ್ಯಕ್ಷೆ ನಾಗ
ಾಯಿ ಅವರು ಮತ್ತು ಪತ್ರ
ರಿ ಲಂಕೇಶ್ 28 ವರ್ಷಗಳ

ಸ್ನೇಹಿತರಾಗಿದ್ದು ಅವರ ಹತ್ಯೆ ಪ್ರಕರಣ ಖಂಡಿಸಿ ಸಭೆಯಲ್ಲಿ ಸಂತಾಪ ಸೂಚಿಸಲಾಯಿತ್ತು.

ಮಹಿಳೆಯರೊಡನೆ ಸಂಯಮ ಗೌರವದಿಂದ ವರ್ತಿಸಲು ಸೂಚನೆ: ಪೊಲೀಸ್ ಠಾಣೆಗೆ ದೂರು ನೀಡಲು ಬಂದ ಮಹಿಳೆಯರೊಡನೆ ಸಂಯಮ ಮತ್ತು ಗೌರವದಿಂದ ಕಾಣುವಂತೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಬಾಯಿ ಅವರು ಸೂಚನೆ ನೀಡಿದರು.ಸಭೆಯಲ್ಲಿ ಎಸ್.ಪಿ. ರಾಹುಲ್ ಕುಮಾರ್ ಶಾಹಪೂರ್ ವಾಡ್ ರವರು ಈ ಹಿಂದಿನ 3 ವರ್ಷಗಳ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣ ಕುರಿತಂತೆ ವರದಿಯನ್ನು ಮತ್ತು ಮಹಿಳೆಯರ ರಕ್ಷಣೆಗಾಗಿ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ವಿವರಿಸಿದರು. ಪ್ರಕರಣಗಳಿಗೆ ಸಂಬಂಧಪಟ್ಟ ಮಾಹಿತಿ ಪ್ರಕಾರ ದೌರ್ಜನ್ಯದ ಪ್ರಮಾಣ ಕಡಿಮೆ ಯಾಗಿದೆ ಎಂದು ತಿಳಿಸಿದರು.

ಭ್ರೂಣಹತ್ಯೆ ತಡೆಗಟ್ಟಲು ಎಚ್ಚರ: ಜಿಲ್ಲಾ ಮಹಿಳಾ ಮತ್ತು ಮಕ್ಕಳ ಇಲಾಖೆ ಪ್ರಕರಣ ದಾಖಲಾತಿ ಅನ್ವಯ 2015– 2016 ರ ವರ್ಷದಲ್ಲಿ 264 ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ 56 ಬಾಲ್ಯ ವಿವಾಹ ಪ್ರಕರಣಗಳು ದಾಖಲಾಗಿದೆ.

ಮಹಿಳೆ ಮತ್ತು ಮಕ್ಕಳ ಸಾಗಾಣಿಕೆ, ಭ್ರೂಣಹತ್ಯೆಯನ್ನು ತಡೆಗಟ್ಟುವುದರ ಜೊತೆ ಗರ್ಭಪಾತಕ್ಕೆ ಸಂಬಂಧಿಸಿದ ಮಾತ್ರೆಗಳನ್ನು ವೈದ್ಯರ ರಶೀದಿ ಇಲ್ಲದೆ ಔಷದಾಲಯಗಳಲ್ಲಿ ವಿತರಿಸುವುದು ದೊಡ್ಡ ಸಮಸ್ಯೆಯಾಗಿ ಪರಿಗಣಿಸಿದೆ ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ನಿಗಾವಹಿಸುವಂತೆ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ದಾಸರಿ ಅವರು ಸೂಚಿಸಿದರಲ್ಲದೆ ಪ್ರಕರಣಗಳನ್ನು ತಡೆಗಟ್ಟಲು ಗಮನ ಹರಿಸಿ ಎಂದು ಎಚ್ಚರಿಕೆ ನೀಡಿದರು.

SG GROUPS OF COMPANY

Company Name :- SG GROUOS
Company Details :-
We are developing all kind of software projects like
Software developing
Website developing
Blog developing
Apps developing
E paper developing
Address:- Bhumika 1 main,
2 cross, shanthi nagar
Hassan-573201
Phone Number:-
9738222641, 797571813 ..
E-Mail ID :- sgroups125@gmail.com

SG Groups